

ರಿಂಗ್‌ರೋಡ್ ಚಿತ್ರದಲ್ಲಿ
ನಟಿ ಖುಷಿ

ನಾಗಾಲೋಟ. ನಟಿ, ನಿರ್ಮಾಪಕಿ ಮತ್ತು ನಿರ್ದೇಶಕಿ– ಈ ತ್ರಿಪಾತ್ರಗಳನ್ನು ಯಶಸ್ವಿಯಾಗಿ ನಿರ್ವಹಿಸಿದ ಹೆಗ್ಗಳಿಕೆ. ‘ಜಂಬದ ಹುಡುಗಿ’, ‘ಬಿಂದಾಸ್ ಹುಡುಗಿ’ ‘ಸ್ಮಗ್ಲರ್’ ಮತ್ತು ‘ಗಂಡುಬೀರಿ’ ಸಿನಿಮಾಗಳ ನಿರ್ದೇಶನದ ಮೂಲಕ ಅವರು ಕನ್ನಡದಲ್ಲಿ ಗಟ್ಟಿಗಿತ್ತಿ ನಿರ್ದೇಶಕಿ ಎಂದೇ ಗುರುತಿಸಿಕೊಂಡಿದ್ದಾರೆ.

ರೂಪಾ ಅಯ್ಯರ್ ಇಲ್ಲಿ ಉಲ್ಲೇಖಿಸಬೇಕಾದ ಇನ್ನೊಂದು ಪ್ರಮುಖ ಹೆಸರು. ‘ದಾಟು’, ‘ಮುಖಪುಟ’, ‘ಚಂದ್ರ’ ಮತ್ತು ‘ಕಲರ್’ ಚಿತ್ರಗಳನ್ನು ನಿರ್ದೇಶಿಸಿರುವ ರೂಪಾ ಅಯ್ಯರ್, ನರೇಂದ್ರ ಮೋದಿಯವರ ಕುರಿತು ‘ನಮೋ’ ಎಂಬ ಚಿತ್ರ ನಿರ್ದೇಶಿಸುವುದಾಗಿ ಹೇಳಿಕೆ ನೀಡಿದ್ದು ಸುದ್ದಿಯಾಗಿತ್ತು.

ಕನ್ನಡದ ನಿರ್ದೇಶಕಿಯರ ಪಟ್ಟಿ ಇಷ್ಟಕ್ಕೇ ನಿಲ್ಲುವುದಿಲ್ಲ. ಇತ್ತೀಚಿನ ವರ್ಷಗಳಲ್ಲಿ ಹಲವು ನಿರ್ದೇಶಕಿಯರು ಗಾಂಧಿನಗರದಲ್ಲಿ ತಮ್ಮ ಅಸ್ತಿತ್ವವನ್ನು ಸಾಬೀತು ಪಡಿಸಲು ಸಾಕಷ್ಟು ಶ್ರಮ ಪಟ್ಟಿದ್ದಾರೆ. ‘ವರ್ಣಿಕ’ ಎನ್ನುವ ಮೂಕಿ ಚಿತ್ರದ ನಿರ್ದೇಶಕಿ ಆಧ್ಯಾ ಗೌಡ, ‘ಕ್ವಾಟ್ಲೆ’ ಚಿತ್ರದ ಚಂದ್ರಕಲಾ, ಜನಪ್ರಿಯ ನಟಿ ರಮ್ಯಾ ಅಭಿನಯದ ‘ಜೂಲಿ’ ಚಿತ್ರ ನಿರ್ದೇಶಿಸಿದ ಪೂರ್ಣಿಮಾ ಮೋಹನ್, ‘ರಿಂಗ್ ರೋಡ್’ ಚಿತ್ರದ ನಿರ್ದೇಶಕಿ ಪ್ರಿಯಾ ಬೆಳ್ಳಿಯಪ್ಪ, ‘ಟ್ರಂಕ್’ ಚಿತ್ರದ ರಿಶಿಕಾ ಶರ್ಮಾ, ‘ಮಿರ್ಚಿ ಖಡಕ್ ಚಾಯ್’ ನಿರ್ದೇಶಕಿ ಸಂಜೋತಾ, ಪ್ರಶಸ್ತಿ ವಿಜೇತ ‘ಅನಲ’ ಕಿರುಚಿತ್ರದ ನಿರ್ದೇಶಕಿ ವಿ.ಕೆ.ಸಂಜ್ಯೋತಿ, ‘ಕಾಜಿ’ ಕಿರುಚಿತ್ರದ ನಿರ್ದೇಶಕಿ ಐಶಾನಿ ಶೆಟ್ಟಿ, ‘ಮಿಠಾಯಿ ಮನೆ’ ನಿರ್ದೇಶಿಸಿದ ಹಿರಿಯ ನಟಿ ಆರತಿ ಮತ್ತು ಅನನ್ಯಾ ಕಾಸರವಳ್ಳಿ ಅವರನ್ನು ಈ ಪಟ್ಟಿಯಲ್ಲಿ ಹೆಸರಿಸಬಹುದು. ನಿರ್ದೇಶಕಿ ಪ್ರಿಯಾ ಬೆಳ್ಳಿಯಪ್ಪ ಅವರ ತಂಡದಲ್ಲಿ ನಿರ್ಮಾಣ, ಸಂಕಲನ, ಛಾಯಾಗ್ರಹಣ– ಹೀಗೆ ಎಲ್ಲವನ್ನೂ ಮಹಿಳೆಯರೇ ನಿರ್ವಹಿಸಿದ್ದು ಗಮನಾರ್ಹ ಸಂಗತಿ. ಈ ಪಟ್ಟಿಯಲ್ಲಿ ಅನನ್ಯ ಅವರದ್ದು ಪ್ರತ್ಯೇಕವಾಗಿ ಗುರುತಿಸಬಹುದಾದ ಸಾಧನೆ. ಬೊಳುವಾರು ಅವರ ‘ಕಪ್ಪು ಕಲ್ಲಿನ ಸೈತಾನ’ ಕಥೆ ಆಧರಿಸಿ ನಿರ್ಮಿಸಿದ ಕಿರುಚಿತ್ರಕ್ಕೆ ಪುಣೆಯ ಚಲನಚಿತ್ರೋತ್ಸವದಲ್ಲಿ ವಿದ್ಯಾರ್ಥಿ ವಿಭಾಗದ ಶ್ರೇಷ್ಠ ಚಿತ್ರ ಪ್ರಶಸ್ತಿ ಪಡೆದಿದ್ದ ಅನನ್ಯಾ, ಕಳೆದ ವರ್ಷ ಚೊಚ್ಚಲ ನಿರ್ದೇಶನದ ‘ಹರಿಕಥಾ ಪ್ರಸಂಗ’ದ ಮೂಲಕ ಸಾಕಷ್ಟು ಸುದ್ದಿ ಮಾಡಿದ್ದಾರೆ. ಸ್ತ್ರೀ ಪಾತ್ರಗಳನ್ನು ಯಶಸ್ವಿಯಾಗಿ ನಿರ್ವಹಿಸುವ ಯಕ್ಷಗಾನ ಕಲಾವಿದನೊಬ್ಬ, ತನ್ನ ವಿಕ್ಷಿಪ್ತ ವ್ಯಕ್ತಿತ್ವದ ಬಗ್ಗೆಯೇ ಅನುಮಾನ ಹೊಂದುವ ವಿಭಿನ್ನ ಕಥೆಯ ಈ ಚಿತ್ರ ಬೂಸಾನ್ ಅಂತರರಾಷ್ಟ್ರೀಯ ಚಿತ್ರೋತ್ಸವಕ್ಕೆ ಆಯ್ಕೆಯಾಗಿದ್ದು ಅನನ್ಯಾ ಕುರಿತು ಸಾಕಷ್ಟು ಭರವಸೆ ಮೂಡಿಸಿದೆ. ತಂದೆ ಖ್ಯಾತ ನಿರ್ದೇಶಕ ಗಿರೀಶ್ ಕಾಸರವಳ್ಳಿ ಅವರ ಹೆಜ್ಜೆ ಜಾಡಿನಲ್ಲಿ ಮಗಳೂ ಮುಂದುವರಿಯುವ ನಿರೀಕ್ಷೆಯನ್ನು ಈ ಚಿತ್ರ ಮೂಡಿಸಿದೆ.

ಮಹಿಳೆಯರು ಇಷ್ಟೊಂದು ಉತ್ಸಾಹದಿಂದ ನಿರ್ದೇಶನಕ್ಕೆ ಇಳಿದಿರುವ ಸ್ಯಾಂಡಲ್‌ವುಡ್‌ನಲ್ಲಿ




ಬದುಕೇ ಬರಡಾಗಿ ಸಮಸ್ಯೆಗಳೇ ಸುಳಿಯಾಗಿ ಸಂಭ್ರಮವೇ ಇಲ್ಲದೆ ಬದುಕಲ್ಲಿ ಸಂತಸ ತರಲು ನಿಮ್ಮ ಪಾಲಿಗೆ ತೆರೆದಿದೆ ಭರವಸೆಯ ಬಾಗಿಲು ಅದೇ

ಶ್ರೀಲಕ್ಷ್ಮೀ ನರಸಿಂಹ ಆಸ್ಟ್ರೋ ಸೆಂಟರ್

ಶಿರೋಮಣಿ ಪಂ|| ಪಾಂಡುರಂಗ ಜೋಷಿರವರು
ವಂಶ ಪಾರಂಪರ್ಯ ಜ್ಯೋತಿಷ್ಯರು

ಶತಮಾನದ ಇತಿಹಾಸದಲ್ಲಿ ಉದ್ದಕ್ಕೂ ಸಮಸ್ಯೆಗಳ ನಡುವೆ ಮನುಷ್ಯನಲ್ಲಿ ಭರವಸೆಯಾಗಿ ಉಳಿದಿದ್ದು ನಮ್ಮ ಜ್ಯೋತಿಷ್ಯ ಶಾಸ್ತ್ರ, ಅಂತ ಜ್ಯೋತಿಷ್ಯ ಶಾಸ್ತ್ರದ ಪ್ರಾವಿಣ್ಯತೆ ಪಡೆದ ಕೆಲವೇ ಪಂಡಿತರ ಸಾಲಲ್ಲಿ ನಮ್ಮ ಜ್ಯೋತಿಷ್ಯ ಪಂಡಿತರು ಹಲವಾರು ವರ್ಷಗಳಿಂದ ಎಲ್ಲರ ಸಮಸ್ಯೆಗಳಿಗೆ ನಿಖರ ಪರಿಹಾರ ನೀಡುತ್ತಿರುವರು.

ಇವರು ನಿಮ್ಮ ಜಾತಕ, ಹಸ್ತರೇಖೆ, ಮುಖಲಕ್ಷಣ ಸ್ವರತರಂಗಗಳ ಮುಖಾಂತರ ಸಂಪೂರ್ಣ ಭವಿಷ್ಯವನ್ನು ತಿಳಿಸುತ್ತಾರೆ. ನಿಮ್ಮ ಸಮಸ್ಯೆಗಳಾದ ವಿದ್ಯೆ, ಉದ್ಯೋಗ, ಆರೋಗ್ಯ ಮನೆಯಲ್ಲಿ ಕಿರಿಕಿರಿ ಮದುವೆಯಲ್ಲಿ ವಿಳಂಬ, ಸಂತಸದಲ್ಲಿ ತೊಂದರೆ ಸಾಲಬಾಧೆ, ಕೋರ್ಟ್ ಕಛೇರಿ, ಹಣಕಾಸಿನ ತೊಂದರೆ ಹಾಗೂ ನಿಮ್ಮ ಮನಸ್ಸಿನಲ್ಲಿ ಯಾವುದೇ ಗುಪ್ತಸಮಸ್ಯೆಗಳಿಗೆ ಶೀಘ್ರ ಪರಿಹಾರ ತಿಳಿಸುತ್ತಾರೆ.

ವಿಶೇಷ ಸೂಚನೆ: ಮದುವೆ ಸಾಲಾವಳಿ, ಮನೆಯ ವಾಸ್ತು, ಸ್ತ್ರೀಪುರುಷ ವಶೀಕರಣ, ಮಾಟ-ಮಂತ್ರಗಳಿಗೆ ವಿಶೇಷ ಶಾಸ್ತ್ರೋಕ್ತ ಪರಿಹಾರವನ್ನು ಶೀಘ್ರದಲ್ಲಿ ಸೂಚಿಸುತ್ತಾರೆ.

ಫೋನಿನ ಮೂಲಕ ನಿಮ್ಮ ಸಂದರ್ಶನವನ್ನು ಖಚಿತ ಪಡಿಸಿಕೊಳ್ಳಿ.
9663606675

ಮನೆವಿಳಾಸ: #409, 2ನೇ ಕ್ರಾಸ್, ಆರ್.ಟಿ.ನಗರ ಮೈನ್ ರೋಡ್, ಹೆಚ್.ಡಿ.ಎಫ್.ಸಿ ಬ್ಯಾಂಕ್ ಪಕ್ಕ, ವಿಷ್ಣುಗಾರ್ಡನ್ ಹೋಟೆಲ್ ಎದುರು, ಆರ್.ಟಿ.ನಗರ, ಬೆಂಗಳೂರು.